(ಊ) ಕೆ.ಎಂ.ಸಿ.ಯಲ್ಲಿ ಕೆಲಸ ಮಾಡುತ್ತಿರುವ ಸರ್ಕಾರಿ ಲೆಕ್ಚರರ್ಸ್ ಹಾಗೂ ಇತರ ಭೋದಕ ಸಿಬ್ಬಂದಿ ವರ್ಗದವರಿಗೆ ಬಡ್ತಿ ನೀಡದೆ ಇರುವುದು.

ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಅಧ್ಯಕ್ಷರೇ, ಮುಚ್ಚಳಿಕೆಯಲ್ಲಿರುವಂತಹ ಕೆ.ಎಂ. ಸಿ. ಈಗ ಆಟೋನಾಮಸ್ ಸಂಸ್ಥೆಯಾದಮೇಲೆ ಅಲ್ಲಿ ಲೆಕ್ಚರರ್ಸ್, ಅಸಿಸ್ಟೆಂಟ್ ಪ್ರೊಫೆಸರ್, ಪ್ರೊಫೆಸರ್‌ದು ರಿಕ್ರೂಟ್‌ಮೆಂಟ್ ಮಾಡುತ್ತಿದ್ದಾರೆ. ಅಲ್ಲಿ ಈಗಿರುವಂತಹ ಉಪನ್ಯಾಸಕರು ಕಳೆದ 10-15 ವರ್ಷಗಳಿಂದ ಉಪನ್ಯಾಸಕರಾಗಿಯೇ ಕೆಲಸ ಮಾಡುತ್ತಿದ್ದಾರೆ. ಈಗ ಅಲ್ಲಿ ಅಡ್ವರ್‌ಟೈಸ್‌ಮೆಂಟ್ ಮಾಡಿ ಹೊಸದಾಗಿ ಏನು ರಿಕ್ರೂಟ್‌ಮೆಂಟ್ ಮಾಡುವುದಕ್ಕೆ ಹೊರಟಿದ್ದಾರೆ. ಈ ರೀತಿಯಾಗಿ ತೆಗೆದು ಕೊಳ್ಳುವಾಗ ಅಲ್ಲಿರುವಂತಹ ಉಪನ್ಯಾಸಕರ ಮೇಲೆ ಪ್ರೊಫೆಸರ್ ಆಗಿ ಬರುತ್ತಿದ್ದಾರೆ. ದುರ್ದೈವ ಎಂದರೆ ಈ ಉಪನ್ಯಾಸಕರೇ ಪ್ರೊಫೆಸರ್ ಆಗಿ ಬರುವವರಿಗೆ ಕಲಿಸಿದ್ದಾರೆ. ಇವರೂ ಸರ್ಕಾರಿ ನೌಕರರು. ಕಮ್ಸ್ ಅಟಾನಮಸ್ ಬಾಡಿ. ಅಲ್ಲಿ ರಿಕ್ರೂಟ್‌ಮೆಂಟ್ ಮಾಡಿ ಅನುಭವದ ಆಧಾರದ ಮೇಲೆ ತೆಗೆದುಕೊಂಡು ಬಿಡುತ್ತಾರೆ. ಇವರು ಸರ್ಕಾರಿ ನೌಕರರಾಗಿರುವುದರಿಂದ ಇವನಿಗೆ ಪ್ರಮೋಷನ್ ಕೊಡುವಂತಹ ಕೆಲಸವನ್ನು ಸರ್ಕಾರದವರು ಮಾಡಲಿಲ್ಲ. ಹಾಗಾಗಿ ಅವರಿಗೆ ಅನ್ಯಾಯವಾಗುತ್ತಿದೆ. ಡಾ|| ಗಜೇಂದ್ರ ಎನ್ನುವವರು ಡಾ|| ವೆಂಕಟೇಶ್ ಎನ್ನುವವರಿಗೆ ಎಂಬಿಬಿಎಸ್, ಎಂಎಸ್ ಕಲಿಸಿದ್ದಾರೆ. ಡಾ||ಗಜೇಂದ್ರ ಇನ್ನು ಲೆಕ್ಚರರ್ ಆಗಿ ಇದ್ದಾರೆ. ಡಾ|| ವೆಂಕಟೇಶ್‌ರವರು ಅನಾಟಮಿನಲ್ಲಿ ಪ್ರೊಫೆಸರ್ ಆಗಿ ಮೊನ್ನೆ ರಿಕ್ರೂಟ್‌ಮೆಂಟ್ ಆಯಿತು. ಹೀಗಾದರೆ ಯಾರು ಒಬ್ಬ ಲೆಕ್ಚರರ್ ಕೈ ಕೆಳಗೆ ಕಲಿತಿದ್ದಾನೆ ಅವರು ಬಂದು ಇವರ ಮೇಲೆ ಪ್ರೊಫೆಸರ್ ಆಗುತ್ತಾರೆ. ಆದುದರಿಂದ ಅಲ್ಲಿ ಸರ್ಕಾರಿ ಅಧಿಕಾರಿ ಏನು ಕಲಿಸುತ್ತಿದ್ದಾರಲ್ಲಾ. ಅವರಿಗೆ ನೀವು ಪ್ರಮೋಷನ್ ಕೂಡಿ. ಅವರಿಗೆ ಪ್ರಮೋಷನ್ ಕೊಟ್ಟು ಡೆಪ್ಯೂಟೇಷನ್ ಮೇಲೆ ಕಿಮ್ಸ್‌ಗೆ ಕಳುಹಿಸಿ. ನಂತರ ಅವರಿಗೆ ರಿಕ್ರೂಟ್‌ಮೆಂಟ್ ಮಾಡುವುದಕ್ಕೆ ಹೇಳಿ. ಇಲ್ಲದಿದ್ದರೆ ಇವರು ಲೆಕ್ಚರರ ಆಗಿಯೇ ಮುಂದುವರಿಯಬೇಕು. ಅವರ ಕೈಯಲ್ಲಿ ಕಲಿತಂತಹ ಶಿಷ್ಯರು ಪ್ರೊಫೆಸರ್, ಅಸೋಸಿಯೇಟ್ ಪ್ರೊಫೆಸರ್, ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಅವರಿಗಿಂತ ಸೀನಿಯರ್ ಆಗುತ್ತಾರೆ. ಅದಕ್ಕೆ ದಯವಿಟ್ಟು ಈ ಅನ್ಯಾಯವನ್ನು ಸರಿಪಡಿಸುವುದಕ್ಕೆ ತುರ್ತು ಕ್ರಮ ತೆಗೆದುಕೊಳ್ಳಬೇಕು.

3.30 ಪಿ.ಎಂ.

ಡಾ|| ಎಂ. ಶಂಕರ್‌ನಾಯಕ್ : ಮಾನ್ಯ ಅಧ್ಯಕ್ಷರೆ, ಯಾವುದೇ ಒಂದು ವಿದ್ಯಾಸಂಸ್ಥೆಯಲ್ಲಿ ಲೆಕ್ಚರರ್ ಆಗದೇ ಪ್ರೊಫೆಸರ್ ಆಗುವುದಕ್ಕೆ ಬರುವುದಿಲ್ಲ. ಅವರು ಹೇಳತಕ್ಕಂಥದ್ದು ನನ್ನ ಗಮನಕ್ಕೆ ಬಂದಮೇಲೆ ನಾನು ಆ ಬಗ್ಗೆ ಎಲ್ಲಾ ವರದಿಯನ್ನು ತರಿಸಿದ. ಒಬ್ಬ ಲೆಕ್ಚರರ್‌ರಿಂದ ಪ್ರೊಫೆಸರ್ ಆಗಬೇಕೆಂದರೆ ಮೊದಲು ಅಸಿಸ್ಟೆಂಟ್ ಪ್ರೊಫೆಸರ್ ಆಗಬೇಕು. ಐದು ವರ್ಷ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಕೆಲಸ ಮಾಡಿದ ಮೇಲೆ ಪ್ರೊಫೆಸರ್‌ಗೆ ಅರ್ಹತೆ ಇರುತ್ತದೆ. ಅವರು ಹೇಳತಕ್ಕಂಥದ್ದು, 15 ವರ್ಷದಿಂದ ಲೆಕ್ಚರರ್ ಆಗಿ ಕಲಸ ಮಾಡುತ್ತಿದ್ದವರು ಒಬ್ಬರೋ ಇಬ್ಬರೋ ಇದ್ದಾರಷ್ಟೆ, ಅವರ ಡಿ.ಪಿ.ಸಿ. ಕ್ಲಿಯರ್ ಆಗಿಲ್ಲ, ಅವರು ರಹಸ್ಯ ವರದಿ ಬಂದಿಲ್ಲ, ಆ ಅಭ್ಯರ್ಥಿಗಳು ಏನು ಅರ್ಜಿಯನ್ನು ಭರ್ತಿ ಮಾಡಬೇಕಾಗಿತ್ತು, ಅವರ ಇನ್ನೂ ಭರ್ತಿ ಮಾಡಿ ಕಳುಹಿಸಿಲ್ಲ. ಅವರು ಅರ್ಜಿ ಭರ್ತಿ ಮಾಡಿ

ಕಳುಹಿಸದೇ ಇರುವುದರಿಂದ ಡಿ.ಪಿ.ಸಿ. ಕ್ಲಿಯರ್ ಆಗದೇ ಇರುವುದರಿಂದ ಅವರಿಗೆ ಲೆಕ್ಚರರ್‌ರಿಂದ ಅಸಿಸ್ಟೆಂಟ್ ಪ್ರೊಫೆಸರ್‌ಗೆ ಬಡ್ತಿ ಸಿಕ್ಕಿಲ್ಲ. ಮೊನ್ನೆ ಅದು ಅಟಾನಮಸ್ ಆದಮೇಲೆ ಇವರಿಗೆ ಅನ್ಯಾಯ ಆಗುತ್ತಿದೆ ಎಂದು, ಡಿ.ಪಿ.ಸಿ. ಆಗದೇ ಇದ್ದರೂ ಇವರ ಸರ್ವೀಸ್‌ನ್ನು ಗಣನೆಗೆ ತೆಗೆದುಕೊಂಡು ಒಂದೇ ಸಾರಿ ಅವರನ್ನು ಪ್ರೊಫೆಸರ್ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಉದ್ದೇಶದಿಂದ ಅವರನ್ನು ಅಸಿಸ್ಟಂಟ್ ಪ್ರೊಫೆಸರ್ ಮಾಡಿದ್ದೇವೆ. ಅಸಿಸ್ಟಂಟ್ ಪ್ರೊಫೆಸರ್ ಆಗಿ ಐದು ವರ್ಷ ಕೆಲಸಮಾಡಿದ ಮೇಲೆ ಅವರು ಪ್ರೊಫೆಸರ್ ಆಗುವುದಕ್ಕೆ ಅರ್ಹರಿರುತ್ತಾರೆ. ಯಾರಿಗೂ ನೇರವಾಗಿ ಲೆಕ್ಚರರ್‌ರಿಂದ ಪ್ರೊಫೆಸರ್ ಆಗಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಮೊದಲು ಅಸಿಸ್ಟಂಟ್ ಪ್ರೊಫೆಸರ್ ಆಗಬೇಕು, ಆಮೇಲೆ ಪ್ರೊಫೆಸರ್ ಆಗಬೇಕೇ ಹೊರತು ಲೆಕ್ಚರರ್‌ರಿಂದ ಪ್ರೊಫೆಸರ್ ಆಗುವುದಕ್ಕೆ ಆಗುವುದಿಲ್ಲ. ಅವರಿಗೆ ಕಲಿಸಿದಂತಹವರು ಬೇರೆ ಕಾಲೇಜಿನಲ್ಲಿದ್ದಾಗ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಐದು ವರ್ಷ ಕೆಲಸ ಮಾಡಿ ಇಲ್ಲಿ ಇಂಟರ್‌ವ್ಯೂಗೆ ಅಟೆಂಡ್ ಆಗಿರುವುದರಿಂದ ಅವರನ್ನು ಪ್ರೊಫೆಸರ್ ಆಗಿ ತೆಗೆದುಕೊಂಡಿದ್ದಾರೆಯೇ ಹೊರತು ನೇರವಾಗಿ ಯಾರನ್ನೂ ಲೆಕ್ಚರರ್‌ರಿಂದ ಪ್ರೊಫೆಸರ್ ಆಗಿ ತೆಗೆದುಕೊಂಡಿಲ್ಲ. ತೆಗೆದುಕೊಳ್ಳುವುದಕ್ಕೂ ಬರುವುದಿಲ್ಲ.

ಋ) ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಕಾಡ್ಗಿಚ್ಚಿನಿಂದ ಮರಗಳ ನಾಶ

ಶ್ರೀ ಹೆಚ್.ಎನ್. ಮಹದೇವ್ ಪ್ರಸಾದ್ (ಗುಂಡ್ಲುಪೇಟೆ) : ಸನ್ಮಾನ್ಯ ಅಧ್ಯಕ್ಷರೆ, ಬಂಡೀಪುರ ಉದ್ಯಾನವನದಲ್ಲಿ ಬಿಣಗಿನಿಂತಿರುವ ಮತ್ತು ಬಿದ್ದಿರುವ ಮರಗಳಿಂದ ಬೇಸಿಗೆಕಾಲದಲ್ಲಿ ಕಾಣಿಸಿಕೊಳ್ಳುವಂಥ ಕಾಡ್ಗಿಚ್ಚಿನಿಂದ ತಿಂಗಳುಗಟ್ಟಲೆ ಅರಣ್ಯ ಬೆಂಕಿಯಲ್ಲಿ ನಾಶವಾಗುತ್ತಿದೆ. ವರ್ಷವರ್ಷ ಬಹಳಷ್ಟು ಅರಣ್ಯ ಈ ರೀತಿಯ ಕಾಡ್ಗಿಚ್ಚಿನಿಂದ ನಾಶವಾಗುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಹಾಗೂ ಅಲ್ಲಿ ಬಹಳ ಬೆಲೆ ಬಾಳುವ ಮರಗಳು ಬಹಳ ವರ್ಷಗಳಿಂದ ಬಿಣಗಿಬಿದ್ದು ಹಾಗೆಯೇ ಇದೆ, ಆದ್ದರಿಂದ ಆ ಉದ್ಯಾನವನಕ್ಕೆ ಯಾವುದೇ ತೊಂದರೆಯಾಗದಂತೆ ಅದನ್ನು ತೆಗೆಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದಕ್ಕೆ ಯೋಚನೆ ಮಾಡಿದೆಯೇ ಎಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ವನ್ಯಜೀವಿ ಸಂರಕ್ಷಣಾ ಕಾಯಿದೆ 1972ರ ತಿದ್ದುಪಡಿ 1991 35(6)ರ ಪ್ರಕಾರ ರಾಷ್ಟ್ರೀಯ ಉದ್ಯಾವನಗಳಲ್ಲಿ ಯಾವ ವ್ಯಕ್ತಿಯೇ ಆಗಲೀ, ಯಾವುದೇ ವಿಧವಾದ ವಿನಾಶಕಾರಿ ಕೃತ್ಯಗಳಾಗಲೀ ಅಂದರೆ ಪ್ರಾಣಿಸಂಕುಲ ಹಾಗೂ ಅವುಗಳ ಆವಾಸಸ್ಥಾನ ಇವುಗಳನ್ನು ಕಾಪಾಡುವ ಹಿತದೃಷ್ಟಿಯಿಂದ ಹಾಳು ಮಾಡುವಂತಿಲ್ಲ. ಹಾಗೂಮ್ಮೆ ಪ್ರಾಣಿಗಳ ಆವಾಸಸ್ಥಾನಗಳ ಅಭಿವೃದ್ಧಿ ಉತ್ತಮಗೊಳಿಸುವ ದೃಷ್ಟಿಯಿಂದ ಯಾವುದೇ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಬೇಕಾದಲ್ಲಿ ಮುಖ್ಯ ವನ್ಯಪ್ರಾಣಿ ಪರಿಪಾಲಕರು, ರಾಜ್ಯ ಸರ್ಕಾರ ಪೂರ್ವಾನುಮತಿಯ ಮೇರೆಗೆ ಅನುಮತಿ ನೀಡಬಹುದಾಗಿದೆ. ಮತ್ತು ಯಾವುದೇ ರೀತಿಯ ಸಾಮಾನ್ಯ ಹಿತದೃಷ್ಟಿಗಳ ಕಾರ್ಯಕಲಾಪಗಳನ್ನು ಕೈಗೊಳ್ಳುವ ಬಗ್ಗೆ ನಿರ್ಧಾರ ನಿಲುವನ್ನು ರಾಜ್ಯಸರ್ಕಾರದ ವನ್ಯಜೀವಿ ಸಲಹಾಮಂಡಳಿಯ ಅಭಿಪ್ರಾಯದ ಮೇರೆಗೆ ನಿರ್ವಹಿಸಬೇಕಾಗಿರುತ್ತದೆ. ರಾಷ್ಟ್ರೀಯ ಉದ್ಯಾನವನವನ್ನು ನಿರ್ಮಾಣ ಮಾಡುವ ಕಾಲಕ್ಕೆ ಶೇಕಡ ಎರಡು ಅರಣ್ಯ ಪ್ರದೇಶಗಳನ್ನು ಮಾತ್ರ